**ಓ.ಎಸ್. ನಂ. 312/2012 ಡಿ.ಡಬ್ಲೂ-2 ಹೆಸರು - ಮನ್ನೇಗೌಡ**

**ಸಾಕ್ಷಿಯನ್ನು ದಿನಾಂಕಃ 14/09/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ.ಎಲ್.ಬಿ. ವಾದಿ ಪರ ವಕೀಲರಿಂದಃ-**

ಪ್ರತಿವಾದಿಯ ತಂದೆ ಮತ್ತು ನಾನು ಅಣ್ಣತಮ್ಮಂದಿರು. ನಾನು ಈ ಹಿಂದೆ ಹಲವು ಬಾರಿ ನ್ಯಾಯಾಲಯಕ್ಕೆ ಬಂದಿದ್ದೇನೆ. ಈ ದಾವೆಯನ್ನು ಯಾರು ಮತ್ತು ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಸರ್ವೆ ನಂಬರ್ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 289/1 ಎ ವಿಸ್ತೀರ್ಣದಲ್ಲಿ 2 ವಾಸದ ಮನೆಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 289/2 ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 1 ಎಕರೆ ಇದೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ ಮಹದೇವು ಮತ್ತು ಮರಿಗೌಡರಿಗೆ ಸೇರಿದ್ದು. ಸದರಿ ಮಹದೇವು ಮತ್ತು ಮರಿಗೌಡ ಜಮೀನನ್ನು ಹೇಗೆ ಹಂಚಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಗೊತ್ತಿರದೇ ಇದ್ದರು ಕೂಡ ಪ್ರತಿವಾದಿ ನನ್ನ ಸಹೋದರನ ಮಗನಾಗಿರುವುದರಿಂದ ಆತನ ಪರವಾಗಿ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಬಂಚಳ್ಳಿ ಹುಂಡಿಯಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡನನ್ನು ಶಿವಣ್ಣ ನನ್ನು ನೋಡಿಲ್ಲ. ನನ್ನ ಮನೆ ಬಂಚಳ್ಳಿ ಹುಂಡಿ ಗ್ರಾಮದ ಒಳಭಾಗದಲ್ಲಿ ಇದೆ. ವಾದಿ ಮತ್ತು ಆಕೆಯ ಗಂಡ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**